<u>**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**</u>

<u>**ಸಿ.ಸಿ. 1782/2016**</u>

| | | |
|---|---|---|
| ಹೆಸರು | ಉಮೇಶ ಎಸ್.ಪಿ. | ಚಾ.ಸಾ.1 |
| ತಂದೆ ಹೆಸರು | ಪಾಂಡುರಂಗ | ಪ್ರಾ.ಸಾ.1 |
| ವಯಸ್ಸು | 56 ವರ್ಷ | |
| ಕೆಲಸ | ಇಂಜಿನಿಯರ್ | ಸಾ.ಪ್ರ.ವ.ಬೋ |
| ವಾಸ | ಬೆಂಗಳೂರು | ದಿ: 30.12.2021 |

<u>**ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದ : –**</u>

ನಾನು 2012 ರಿಂದ 2018ರವರೆಗೆ ಪವರ್ ಗ್ರೀಟ್ ಕಾರ್ಪೋರೇಷನ್ ಆಫ್ ಇಂಡಿಯಾ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ನನಗೆ ಚಾ.ಸಾ.2 ರಿಂದ 6 ಗೊತ್ತು. ದಿ:24.01.2015 ರಂದು ನಮ್ಮ ಕೂಲಿ ಆಳುಗಳು ಗಂಗಾಪುರ, ಲೋಕೇಶನ್ ನಂ.:15ನಲ್ಲಿ ಕೆಲಸ ಮಾಡುತ್ತಿದ್ದಾಗ 1ನೇ ಆರೋಪಿ ಸ್ಥಳಕ್ಕೆ ಬಂದು ಆಳುಗಳನ್ನು ಆಂಗ್ಲರ್ ಪೀಸ್‌ನಿಂದ ಹೊಡೆಯಲು ಪ್ರಯತ್ನಿಸಿದರು. ಆಗ ನಮ್ಮ ಕೆಲಸದವರು ಕೆಲಸ ನಿಲ್ಲಿಸಿದ್ದರು. ನಂತರ ನಾವು ಸ್ಥಳಕ್ಕೆ ಬಂದು ನೋಡಿದಾಗ 1ನೇ ಆರೋಪಿ ಸ್ಥಳದಲ್ಲಿದ್ದು, ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು. ನನಗೂ ಹಾಗೂ ಚಾ.ಸಾ.2ರವರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು. ನಾವು 1ನೇ ಆರೋಪಿ ಕಂಬ ಬಹಳ ಸಡಿಲವಾಗಿದೆ, ಅದನ್ನು ಹಾಗೇ ಬಿಟ್ಟರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ, ದಯಮಾಡಿ ಸಹಕರಿಸಿ ಎಂದು ಹೇಳಿದೆ. ಅವರು ನಮ್ಮ ಮಾತು ಕೇಳಲಿಲ್ಲ. ಮುಂದುವರೆದು, ಅವರು ನಮ್ಮೆಲ್ಲರ ಮೇಲೂ ಹಲ್ಲೆ ಮಾಡಲು ಪ್ರಯತ್ನಿಸಿದರು. ನಂತರ ನಾವು ಅವರನ್ನು ಜೀಪ್‌ನಲ್ಲಿ ಕೂರಿಸಿಕೊಂಡರು. ನಂತರ ನಾವು ಚಾ.ಸಾ.5ರವರಿಗೆ ಕರೆ ಮಾಡಿ ವಿಚಾರ ತಿಳಿಸಿದಾಗ ಅವರು ನನಗೆ ಅವರ ಪರಿಚಯವಿದೆ, ಕರೆದುಕೊಂಡು ಬನ್ನಿ ಎಂದು ಹೇಳಿದರು. 1ನೇ ಆರೋಪಿ ಚಾ.ಸಾ.5ರವರನ್ನು ನೋಡಿ ನನಗೆ ಬೂಟುಗಾಲಿನಿಂದ ಒದ್ದರು. ಊರಿನ ಜನರು ಗುಂಪು ಸೇರಿದ್ದರು. ಅವರೆಲ್ಲರೂ ನಮ್ಮ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು. ರಾಮಸಂದ್ರದ ಔಟ್ ಪೋಸ್ಟ್‌ನಲ್ಲಿದ್ದವರು ನಂದಗುಡಿ ಠಾಣೆಗೆ ವಿಚಾರ ತಿಳಿಸಿದ್ದು, ಉಪ ಆರಕ್ಷಕರು ಸ್ಥಳಕ್ಕೆ ಬಂದರು. ಆಗ ಪೊಲೀಸರು ಗಲಾಟೆಯನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ನಂತರ ನನ್ನಿಂದ ದೂರು ಪಡೆದು ನಮ್ಮನ್ನು ಬರಲು ಹೇಳಿ 1ನೇ ಆರೋಪಿಯನ್ನು ಜೀಪಿನಲ್ಲಿ ಕರೆದುಕೊಂಡು ಠಾಣೆಗೆ ಹೋದರು. ನಂತರ ನಾವು ನಮ್ಮ ಜೀಪನ್ನು ಪೊಲೀಸರ ವಶಕ್ಕೆ ನೀಡಿರುತ್ತೇವೆ.

ನಂತರ 3 ದಿನಗಳ ಬಳಿಕ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದರು. ಸದರಿ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರ್ತಿಸಿದ್ದು, ನಿವೇದನೆಯನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1[ಎ] ಎಂದು, ಮಹಜರ್‌ನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2[ಎ] ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಎಪಿಪಿರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಅನುಮತಿ ನೀಡಿ ಪ್ರಕರಣವನ್ನು ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**